STATEMENT

PRIVATE BODIES

Number of High Schools

Including those permitted to be opened during 1969-70.

	Districts		
1	Bangalore City	..	149
2	Bangalore Rural	..	89
3	Tumkur	..	105
4	Kolar	..	75
5	Mandya	..	55
6	Mysore	..	105
7	Coorg	..	39
8	South Kanara	..	143
9	Chitradurga	..	85
10	Hassan	..	57
11	Chickmagalur	..	46
12	Shimoga	..	78
13	Dharwar	..	150
14	Belgaum	..	152
15	Bijapur	..	93
16	North Kanara	..	102
17	Gulbarga	..	50
18	Raichur	..	39
19	Bidar	..	36
20	Bellary	..	61
		Total	1,709

Calling Attention to a matter of urgent Public Importance *re*: hunger strike by the N.G.O's. near Vidhana Soudha

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—63ನೆಯ ನಿಯಮದ ಮೇರೆಗೆ ಜರೂರಾದ ಸಾರ್ವಜನಿಕ ಪ್ರಾಮುಖ್ಯತೆಯ ವಿಚಾರವೊಂದನ್ನು ಎಂದರೆ, ವಿಧಾನಸೌಧದ ಬಳಿ ಎನ್.ಜಿ.ಓ.ಗಳ ಸಂಘದ ಪರವಾಗಿ ಕೈಕೊಂಡಿರುವ ಉಪವಾಸ ಮುಷ್ಕರದ ವಿಚಾರವನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

Sri VEERENDRA PATIL (Chief Minister).—On 4th August 1969, the General Secretary of the N.G.Os' Association made a press statement that his constituents would observe a 36-hour hunger strike commencing from 18th August 1969 in front of Vidhana Soudha to press

(SRI VEERENDRA PATIL)

the Government to concede their pending demands. In accordance with this decision, 50 Non-Gazetted Officers led by Shri P. S. Sripathi, President of the Association commenced a 36-hour hunger strike at 7 A.M. on 18th August 1969. This strike was called off at 7 P.M. on 19th August 1969. Earlier in the last week of July, this Association had launched a post card campaign. Printed post cards listing their demands were sent to Chief Minister. The main demands of the Association relate to setting up of a Joint Consultative Machinery for Government employees of Mysore, implementation of the recommendation of the Pay Commission for revision of pay scales and payment in cash of additional dearness allowance which was withheld and earmarked for compulsory savings and regularisation of the services of local candidates.

Regarding the first demand, the decision of Government was intimated to the Association as far back as March 1967. Government had come to the conclusion that it was not desirable to introduce any Joint Consultative machinery when the Staff Councils, which had been earlier set up on the pattern of the Central Staff Council, were working satisfactorily. Government were not agreeable to any system of compulsory arbitration by these staff Councils or other Consultative Bodies. The issues relating to pay and allowances affect the budgetary resources of Government and have a direct bearing on the availability of funds for Development programmes of Government. Government cannot afford to surrender its right to take a decision on these vital matters to any consultative body or council.

In regard to the demand for revision of pay scales and payment of dearness allowance in cash, it must be emphasised that the State Government have already implemented the recommendation of the pay Commission relating to dearness allowance, house rent allowance and city compensatory allowance. Liberal increase in dearness allowance has already been granted with the result that the rates now applicable to non-gazetted employees of Mysore are on par with those admissible to Central Government employees and in fact in certain pay range the scale of dearness allowance in Mysore is more liberal. The extra financial liability assumed by the State Government on account of enhancement of dearness allowance, house rent allowance and city compensatory allowance is of the order of Rs. 3.25 crores per annum.

The question of revision of pay scales is linked with the acceptance by Government of the suggestions regarding amalgamation of pay scales contained in the Tukol Commission Report. In financial terms, the immediate cost of such a revision would be of the order of Rs. 11 crores per annum to the State exchequer and the average recurring cost would be about Rs. 15 crores per annum. The State Government are hardly in a position to meet this additional liability considering its present resources position. However, a final decision in this matter has been

deferred pending the award of the Finance Commission who have been requested to take into consideration the cost of pay revision and other additional liabilities of the State Government before giving their award.

It may also be stated that Government are already committed to the implementation of certain Development programmes. If the demand for revision of pay scales were conceded, the existing wage bill would go up by about 30 per cent and there will be no resources left for Development programmes.

The Pay Commission had also suggested that part of the extra expenditure on revision of pay scales can be off-set by reduction of staff after taking into consideration of suitable work-load for various categories of employees. This recommendation would necessarily involve retrenchment of surplus staff.

The decision to withhold part of the dearness allowance and invest it in savings was taken because the State Government was having an overdraft with the Reserve Bank of India and they had approached the Government of India for an *ad hoc* loan. A portion of the dearness allowance which was withheld for the period from 1st March 1968 to 31st December 1968, could not cause any hardship because this dearness allowance was released in cash for the subsequent periods from 1st January 1969. The held-over dearness allowance for the temporary period of about ten months has been invested in five-year fixed deposits and National Savings Certificates on behalf of the Government employees. This is in the nature of compulsory savings, the benefit of which will be available to the concerned Government servant.

In regard to the local candidates, Government have already issued orders that the services of all local candidates in Class III, who were appointed before 1st January 1965, should be regularised. Regarding local candidates recruited after 1st January 1965, they were given an opportunity to apply for the vacancies notified by the Public Service Commission and such of them, who applied to the Commission and were considered suitable, would be appointed against regular vacancies. This is the maximum that Government can do, because it is to be borne in mind that local candidates are appointed as a stop-gap arrangement pending the appointment of regular candidates through normal recruitment procedures. If the local candidates were absorbed permanently, the posts available for regular candidates, who will be applying for these posts under the normal Cadre and Recruitment Rules, will be correspondingly reduced. In practice, this will particularly affect the employment opportunities available for weaker sections of the community.

I hope, in the light of this factual statement, the House will appreciate that Government have been very sympathetic to the demands of the Non-Gazetted officers and have done all that is possible within the limitations of the resources to improve the conditions of their employment and meet their legitimate grievances.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ನಾನು ಒಂದು ನಿಲುವಳಿ ಸೂಚನೆಯನ್ನು ಇದರ ಬಗ್ಗೆ ಕಳಿಸಿದ್ದೆ. ಆದುದರಿಂದ ಎರಡು ಪ್ರಶ್ನೆಯನ್ನು ಕೇಳುವುದಕ್ಕೆ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮಾನ್ಯ ಮುಖ್ಯಮಂತ್ರಿಗಳು ಹೇಳಿರುವಹಾಗೆ ಲೋಕಲ್ ಕ್ಯಾಂಡಿಡೇಟ್ಸ್ ಬಗ್ಗೆ ಮಾತ ನಾಡುತ್ತಾ ಇಷ್ಟೇ ಮಾಡುವುದಕ್ಕೆ ಸಾಧ್ಯ, ಅದಕ್ಕಿಂತ ಮುಂದೆ ಹೋಗುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ನಾನು ಅವರ ಗಮನಕ್ಕೆ ತರುವುದೇನೆಂದರೆ, ಇವರಿಗೆ ಹಿಂದೆ ಮುಖ್ಯ ಮಂತ್ರಿ ಗಳಾಗಿದ್ದ ಮಾನ್ಯ ನಿಜಲಿಂಗಪ್ಪನವರು ಇದೇ ವಿಷಯದೊಳಗೆ ಈ ಸಭೆಯಲ್ಲಿ ಮತ್ತು ಮೇಲ್ಮನೆ ಯಲ್ಲಿ ಚರ್ಚೆಯಾದಾಗ, ಲೋಕಲ್ ಕ್ಯಾಂಡಿಡೇಟ್ಸ್ ಯಾರಿದ್ದಾರೆ ಅವರನ್ನೆಲ್ಲ ರೆಗ್ಯುಲರೈಸ್ ಮಾಡುತ್ತೇವೆ ಎಂದು ಸ್ಪಷ್ಟವಾಗಿ ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೋ ? ಹಾಗೆ ಬಂದಮೇಲೂ ಸಹ ಈ ಹೊತ್ತು ಇವರನ್ನು ಹೊರಗೆ ಅಟ್ಟುವುದು ಸರಿಯಾದದ್ದೇ ? ಹೆಚ್ಚು ಹೆಚ್ಚು ಕೆಲಸ ಕೊಡಬೇಕು ಎನ್ನುವ ನಿಮ್ಮ ಧ್ಯೇಯ, ನೀತಿ, ಧೋರಣೆಗೆ ಇದು ವಿರೋಧವಾಗಿಲ್ಲವೇ ? ಈ ವಿಷಯವನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನನಗಿಂತ ಮುಂಚೆ ಇದ್ದ ಮುಖ್ಯ ಮಂತ್ರಿಯವರು ಈ ಸಭೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಹೇಳಿದಂಥದ್ದು ನನ್ನ ಗಮನಕ್ಕೆ ಬಂದಿರುವ ಪ್ರಕಾರ ತಾರೀಖು 1–1–1965ರ ನಂತರ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ನೇಮಕ ಮಾಡಿದಂಥವರಿಗೆ ಖಾಯಂ ಮಾಡುತ್ತೇವೆ, ಅವರನ್ನು ರೆಗ್ಯುಲರೈಸ್ ಮಾಡುತ್ತೇವೆ ಎಂದು ಹೇಳಿರುವುದು ನನ್ನ ಗಮನಕ್ಕೆ ಬಂದಿಲ್ಲ. ಮತ್ತು ತಾರೀಖು 1–1–65ರಂದು ಯಾರು ಯಾರು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಇದ್ದರು ಅವರಿಗೆ ರೆಗ್ಯುಲರೈಸ್ ಮಾಡುತ್ತೇವೆನ್ನುವ ಅರ್ಥದಲ್ಲಿ ಹೇಳಿದ್ದರು. ಅದರ ನಂತರ ಎಂದರೆ 1–1–65ರಿಂದೀಚೆಗೆ ಅನೇಕ ಕಡೆ ಅನೇಕ ಹಂತಗಳಲ್ಲಿ ಲೋಕಲ್ ಅಪಾಯಿಂಟ್‌ಮೆಂಟ್ಸ್ ಆಗಿವೆ. ಇದರಲ್ಲಿ ಮಾನ್ಯ ಸದಸ್ಯರು ಒಂದು ವಿಚಾರವನ್ನು ಮರೆಯಬಾರದು. ನಮ್ಮ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ 48 ಪರ್ಸೆಂಟ್ ಸ್ಥಾನಗಳನ್ನು ಕೆಲವು ವೀಕರ್ ಸೆಕ್ಷನ್ಸ್‌ಗೆ ರಿಸರ್ವೇಷನ್ ಮಾಡಿದ್ದೇವೆ. ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಇರುವವರನ್ನು ಅಲ್ಲಲ್ಲಿ ಇರುವ ಸ್ಥಳೀಯ ಅಧಿಕಾರಿಗಳು ಕೆಲಸವನ್ನು ತೂಗಿಸಿಕೊಂಡು ಹೋಗುವ ಕಾರಣದಿಂದ ನೇಮಕ ಮಾಡಿ ಕೊಂಡಿದ್ದಾರೆ. ಎಲ್ಲೆಲ್ಲಿ ಎಷ್ಟು ಜನರನ್ನು ನೇಮಕ ಮಾಡಿಕೊಂಡಿದ್ದಾರೆ ಎನ್ನುವ ವಿಷಯ ಸಂಗ್ರಹಣೆ ಮಾಡುವುದಕ್ಕೆ ನಮಗೆ ಸಾಧ್ಯವಾಗಿಲ್ಲ. ಅದಕ್ಕಾಗಿ ನಮ್ಮ ಸೊಸೈಟಿಯಲ್ಲಿರುವ 48 ಪರ್ಸೆಂಟ್ ವೀಕರ್ ಸೆಕ್ಷನ್ ಕೇಡರ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ರಿಸರ್ವೇಷನ್ ಇಟ್ಟಿರುವಾಗ ಎಲ್ಲ ಸ್ಥಳೀಯ ಅಭ್ಯರ್ಥಿಗಳನ್ನೂ ರೆಗ್ಯುಲರೈಸ್ ಮಾಡಿಕೊಂಡು ಹೋದರೆ ಬಹುಶಃ ವೀಕರ್ ಸೆಕ್ಷನ್ನಿನ ಅನೇಕ ಜನರಿಗೆ ಸ್ಥಾನವೇ ಇಲ್ಲದಂಥ ಪರಿಸ್ಥಿತಿ ಬರುತ್ತದೆ. ಅದಕ್ಕಾಗಿ ಆ ಜನರೂ ಕೂಡ ಪಬ್ಲಿಕ್ ಸರ್ವಿಸ್ ಕಮಿಷನ್ ಮುಂದೆ ಹೋಗಿ, ಇಂಟರ್‌ವ್ಯೂ ಕೊಟ್ಟು, ಯೋಗ್ಯತೆ ಇದ್ದರೆ ಸೆಲೆಕ್ಟ್ ಆಗುವುದಕ್ಕೆ ಏನು ಅನುಕೂಲತೆಗಳು ಬೇಕೋ ಅದನ್ನೆಲ್ಲ ಮಾಡಿಕೊಟ್ಟಿದ್ದೇವೆ. ಅಲ್ಲದೆ ನಿಮ್ಮನ್ನೆಲ್ಲ ರೆಗ್ಯುಲರೈಸ್ ಮಾಡುವುದಕ್ಕಾಗುವುದಿಲ್ಲ ನೀವು ಪಬ್ಲಿಕ್ ಸರ್ವಿಸ್ ಕಮಿಷನ್ ಮುಂದೆ ಹೋಗಬೇಕು ಎಂದು ತಿಳಿಸಿದ್ದೇವೆ. ಅದರಮೇಲೆ ಎಷ್ಟು ಜನ ಪಬ್ಲಿಕ್ ಸರ್ವಿಸ್ ಕಮಿಷನ್ ಮುಂದೆ ಹೋಗಿದ್ದಾರೆ ಅವರ ಬಗ್ಗೆ ಪಬ್ಲಿಕ್‌ಸರ್ವಿಸ್ ಕಮಿಷನ್‌ನವರು ಯೋಚನೆ ಮಾಡುತ್ತಾರೆ. ಆವರ ಮುಂದೆ ಹೋಗದೆ ಇರುವವರಿಗೆ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—1–1–1965ರಿಂದೀಚೆಗೆ ನೇಮಕವಾಗಿರುವವರಿಗೂ ರೆಗ್ಯು ಲರೈಸ್ ಮಾಡಬೇಕು ಎಂದು ಮಾನ್ಯ ನಿಜಲಿಂಗಪ್ಪನವರು ಹೇಳಿರುವುದಾಗಿ ನನ್ನ ಅಭಿಪ್ರಾಯ. ಅದನ್ನು ಗಮನಕ್ಕೆ ತಂದರೆ ಆವಾಗ ಎಲ್ಲರನ್ನೂ ರೆಗ್ಯುಲರೈಸ್ ಮಾಡುತ್ತಾರೆಯೇ? ವೀಕರ್ ಸೆಕ್ಷನ್, ಸ್ಟ್ರಾಂಗರ್ ಸೆಕ್ಷನ್ ಎಂದು ಹೇಳುತ್ತಾ ಭೇದೋಪಾಯ ಮಾಡುವುದು ಸರಿಯಲ್ಲ. ಇದರೊಳಗೆ ವೀಕರ್ ಸೆಕ್ಷನ್‌ಗೆ ಸೇರಿರುವವರೂ ಮೂರು ನಾಲ್ಕು ವರ್ಷದಿಂದ ಕೆಲಸ ಮಾಡಿದ್ದಾರೆ ಅಂಥವರಿಗೂ ರೆಗ್ಯುಲರೈಸ್ ಮಾಡಿಲ್ಲ, ಅವರನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಯಾರೋ ಮಾಡಿ ದ್ದಾರೆ ಎಂದು ಅವರಮೇಲೆ ಹೊಣೆ ಹಾಕಿ ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸ ಮಾಡುತ್ತಿರುವವರನ್ನು ನಿರುದ್ಯೋಗದ ಬಾಯಿಗೆ ತಳ್ಳಬಾರದು. ಆದ್ದರಿಂದ ಮಾನ್ಯ ನಿಜಲಿಂಗಪ್ಪನವರು ಹೇಳಿರುವುದನ್ನು ಸರ್ಕಾರದ ಗಮನಕ್ಕೆ ತಂದರೆ ಆಗ ಪುನಃ ಪರಿಶೀಲನೆ ಮಾಡುತ್ತಾರೆಯೆ ?

ಶ್ರೀ ವೀರೇಂದ್ರ ಪಾಟೀಲ್.—ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆಂದು ನನ್ನ ಅಭಿಪ್ರಾಯ. ನನ್ನ ಗಮನಕ್ಕೆ ಬಂದಿರುವ ವಿಚಾರವೇನು ಎಂಬುದನ್ನು ನಾನು ಹೇಳಿದ್ದೇನೆ. ಮಾನ್ಯ ಸದಸ್ಯರ ಹತ್ತಿರ ಏನು ರಿಕಾರ್ಡ್ ಇದೆ ಎನ್ನುವುದು ನನಗೆ ಗೊತ್ತಿಲ್ಲ. ಅದು ಗೊತ್ತಾಗದೆ ಏನಾದರೂ ಹೈಪೋಥಿಟಿಕಲ್ ಆಗಿ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ (ಹರಿಹರ).—ಫೈನಾನ್ಸ್ ಕಮಿಷನ್ ಮುಂದೆ ಈ ವಿಷಯವನ್ನು ಇಟ್ಟಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಫೈನಾನ್ಸ್ ಕಮಿಷನ್ ರಿಪೋರ್ಟ್ ಬಂದಿದೆ ಎಂದು ಪತ್ರಿಕೆಗಳಲ್ಲಿ ಓದಿದ್ದೇವೆ. ಅದರಿಂದ ಏನಾದರೂ ಪರಿಹಾರ ನಾನ್ ಗೆಜೆಟೆಡ್ ಅಧಿಕಾರಿಗಳಿಗೆ ದೊರೆಯತಕ್ಕ ಸನ್ನಿವೇಶವಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನಮಗೆ ಆ ವಿಚಾರ ಗೊತ್ತಿಲ್ಲ, ಫೈನಾನ್ಸ್ ಕಮಿಷನ್‌ರವರು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದಾರೆಂದು ಪತ್ರಿಕೆಯಲ್ಲಿ ಬಂದಿರಬಹುದು, ಆದರೆ ಕೇಂದ್ರ ಸರಕಾರದವರ ವರದಿ ತಮಗೆ ಬಂದಿದ್ದರೆ ಅದನ್ನು ಪರಿಶೀಲಿಸಿ ಒಂದು ತೀರ್ಮಾನ ಮಾಡಿ ಹೊರಗೆಡುಹುವವರೆಗೆ ನಮಗೆ ಅವರ ವಿಚಾರ ಖಚಿತವಾಗಿ ಗೊತ್ತಾಗುವುದಿಲ್ಲ, ಅದು ಗೊತ್ತಾಗುವ ವರೆಗೆ, ಅವಾರ್ಡ್ ಗೊತ್ತಾಗುವುದಕ್ಕೆ ಮುಂಚೆ ಏನು ಹೇಳುವುದು ಕಷ್ಟ.

ಶ್ರೀ ಎಂ. ಎಸ್. ಕೃಷ್ಣನ್.—ತುಕೋಲ್ ಕಮಿಷನ್ ವರದಿಯನ್ನು ಜಾರಿಗೆ ತರಲು ಮೀನಮೇಷ ನೋಡುತ್ತಿದ್ದೀರಿ ಆದರೆ ಇದೇ ರೀತಿ ಪೇ ಕಮಿಷನ್ ನೇಮಕಮಾಡಿದ್ದ ಆಂಧ್ರ, ಕೇರಳ, ಪಶ್ಚಿಮ ಬಂಗಾಳ ಮುಂತಾದ ರಾಜ್ಯಗಳವರು ಕಮಿಷನ್ ಕೊಟ್ಟ ವರದಿಯನ್ನು ಜಾರಿಗೆ ಕೊಟ್ಟಿದ್ದಾರೆ. ಅವರಿಗೆ ಹಾಗೆ ಜಾರಿಗೆ ತರಲು ಸಾಧ್ಯವಾಗಿರುವಾಗ ಈ ಮೈಸೂರು ಸರಕಾರದವರಿಗೆ ಜಾರಿಗೆ ತರಲು ಸಾಧ್ಯವಾಗದಿರಲು ಕಾರಣವೇನು ? ತಮ್ಮ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲವೆಂದು ಸರಕಾರ ನೆಪ ಹೇಳಬಹುದು. ಆದರೆ ಪೇ ಕಮಿಷನ್ ರಚಿಸುವಾಗ ಮುಂಚೆ ಈ ಪರಿಸ್ಥಿತಿ ಬರುತ್ತದೆಂಬುದು ತಮಗೆ ಗೊತ್ತಿರಲಿಲ್ಲವೇ ? ಹಾಗೆ ಗೊತ್ತಿದ್ದು ಕಮಿಷನ್ ರಚಿಸಿದಮೇಲೆ ಅದು ಕೊಟ್ಟ ವರದಿಯನ್ನು ಜಾರಿಗೆ ತರುವುದಿಲ್ಲವೆಂದರೆ ಹಾಗೆ ಹೇಳುವುದು ತತ್ವಕ್ಕೆ ವಿರೋಧವಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಹಾಗಲ್ಲ ಅದು. ಇತರ ರಾಜ್ಯಗಳಲ್ಲಿ ಪೇ ಕಮೀಷನ್ ಮಾಡಿ ಅದು ಕೊಟ್ಟ ವರದಿಯನ್ನು ಜಾರಿಗೆ ತಂದಿರುವ ವಿಚಾರ ನಮಗೆ ಗೊತ್ತಿಲ್ಲ. ನನಗೆ ಗೊತ್ತಿರುವ ಹಾಗೆ ಮದ್ರಾಸಿನಲ್ಲೂ ಕೂಡ ಅಲ್ಲಿನ ಮುಖ್ಯ ಮಂತ್ರಿಗಳು ಕೂಡ ಫೈನಾನ್ಸ್ ಕಮಿಷನ್ ಅವಾರ್ಡ್ ಬರುವವರೆಗೆ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಅವಾರ್ಡ್ ಯಾವರೀತಿ ಬರುವುದೋ ನೋಡಬೇಕು. ಅದು ಬರುವುದಕ್ಕೆ ಮುಂಚೆ ಏನು ಹೇಳುವುದಕ್ಕೂ ಸಾಧ್ಯವಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟ ಉತ್ತರದ ಪ್ರತಿ ನನ್ನ ಹತ್ತಿರ ಇಲ್ಲ. ಆದರೆ ಅವರ ಹೇಳಿಕೆ ಬಹಳ ನಿರಾಶಾದಾಯಕವಾಗಿದೆ. ಇದರಲ್ಲಿ ಎರಡು ಮುಖ್ಯ ವಿಷಯಗಳಿಗೆ. ಎನ್.ಜಿ.ಓ. ಗಳು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಮಾಡುತ್ತಿದ್ದಾರೆ, ಕಾರ್ಡ್ ಚಳವಳಿ ಮಾಡಿದ್ದಾರೆ, ಉಪವಾಸ ಇತ್ಯಾದಿ ಮಾಡುತ್ತಿದ್ದಾರೆ. ಬೇರೆ ರಾಜ್ಯಗಳಲ್ಲಿ ಮಾಡಿದಂತೆ ಹಿಂಸಾತ್ಮಕ ಕೃತ್ಯವನ್ನು ಅವರು ಮಾಡಿಲ್ಲ. ಶ್ರೀ ಕೃಷ್ಣನ್‌ರವರು ಹೇಳಿದಂತೆ ಪೇಕಮಿಷನ್ ನೇಮಕಮಾಡಿದಂಥ ಸರಕಾರ ಅದನ್ನು ಜಾರಿಗೆ ತರಲು ಬದ್ಧವಾಗಿದೆ. ಆದಕಾರಣ ಸರ್ಕಾರ ಪೇ ಕಮಿಷನ್ ಕೊಟ್ಟಿರುವ ವರದಿಯನ್ನು ಕಾರ್ಯಗತಮಾಡಬೇಕು. ಹಾಗೆ ಮಾಡುವುದರಿಂದ ಬೊಕ್ಕಸಕ್ಕೆ ಹೊರೆಯಾಗುತ್ತದೆಂದು ಹೇಳುತ್ತಾರೆ. ಎಷ್ಟು ಕೊಡಬೇಕು, ಏನು ಮಾಡಬೇಕು ಎಂಬುದು ಸರಕಾರಕ್ಕೆ ಸೇರಿದ್ದು. ಜೊತೆಗೆ ಟೆಂಪೊರೆರಿ ಕೆಲಸಗಾರರೇನಿದ್ದಾರೆ ಅವರ ಬಗೆಗೆ ಮುಖ್ಯ ಮಂತ್ರಿಗಳು ಹೇಳಿದ್ದನ್ನು ಕೇಳಿ ಬಹಳ ವಿಷಾದವಾಯಿತ್ತು. ಸ್ಥಾನಗಳು ಖಾಲಿ ಬಿದ್ದಾಗ ಅಡ್ವಟೈರ್ಜ್ ಮಾಡಿ ಸರಿಯಾದವರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಪಿ.ಎಸ್.ಸಿ.ಗೆ ಏನು ತೊಂದರೆಯಿತ್ತು ? ಹಿಂದೆ ಒಂದು ಸಲ ಲೋಕಲ್ ಕ್ಯಾಂಡಿಡೇಟ್ಸನ್ನು ರೆಗ್ಯುಲರೈಜ್ ಮಾಡಿದರು. ಹಾಗೆ ಮಾಡಿದಮೇಲೆ ಅಲ್ಲಿಂದೀಚೆಗೆ ಏಕೆ ಲೋಕಲ್ ಕ್ಯಾಂಡಿಡೇಟ್ಸ್ ನೇಮಕಮಾಡಿಕೊಳ್ಳಬೇಕಾಗಿತ್ತು ? ಈ ವಿಚಾರಗಳೆಲ್ಲಾ ಕೂಲಂಕಷವಾಗಿ ಪರಿಶೀಲನೆಮಾಡಿ ಪುನರ್ಪರಿಶೀಲನೆ ಮಾಡಬೇಕು. ಇಲ್ಲಿಯವರೆಗೆ ಎನ್.ಜಿ.ಓ. ಗಳಿಗೆ ತಾತ್ಕಾಲಿಕ ಪರಿಹಾರ ಕೊಡಬೇಕು ಹಾಗೆ ಕೊಟ್ಟ ಹೆಚ್ಚಿನ ಹಣ ಒದಗಿಸಿಕೊಳ್ಳಲು ಮತ್ತು ಪೇ ಕಮೀಷನ್ ವರದಿಯನ್ನು ಕಾರ್ಯಗತಮಾಡಲು ಜಾಗ್ರತೆ ಸೂಕ್ತ ಕ್ರಮ ಕೈಕೊಳ್ಳಬೇಕು ಜೊತೆಗೆ ಈ ದಿವಸ ತಾತ್ಕಾಲಿಕವಾಗಿ ಲೋಕಲ್ ಕ್ಯಾಂಡಿಡೇಟ್ಸ್ ನೇಮಕಮಾಡಿಕೊಂಡಿರುವವರಲ್ಲಿ ಕೆಲವರಿಗೆ 3—4 ವರ್ಷ ಸರ್ವಿಸ್ ಆಗಿದೆ, ಕೆಲವರಿಗೆ ಇನ್‌ಕ್ರಿಮೆಂಟ್ ಸಹ ದೊರೆತಿದೆ. ಅವರನ್ನು ರೆಗ್ಯುಲರೈಸ್ ಮಾಡಲು ದೊಡ್ಡ ಮನಸ್ಸು ಮಾಡಬೇಕೆಂದು ಒತ್ತಾಯಮಾಡುತ್ತೇನೆ.

SRI B. B. SAYANAK.—When the Government of Mysore appointed the Pay Commission, is it not the duty of the Mysore Government to implement its Report ?

SRI T. R. SHAMANNA.—Is it not also obligatory that Mahajan Commission Report is also to be accepted !

Sri VEERENDRA PATIL.—The hon. Member wants to know, having appointed the Pay Commission is it not the duty of the Government to implement the recommendations of the Pay Commission? Sir, I have already made it clear in my statement what are the recommendations of the Commission which have been already implemented. Certain recommendations have got larger financial implications and we have represented the matter to the Finance Commission, and I have said in my statement that much depends upon the award that we are going to get from the Finance Commission.

Floor Crossing by Sri K. P. Chikke Gowda

ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ನನ್ನ ಪಕ್ಷದ ಸದಸ್ಯರಾದ ಶ್ರೀಮಾನ್ ಕೆ. ಪಿ. ಚಿಕ್ಕೇಗೌಡರು ನನಗೆ ಒಂದು ಕಾಗದ ಬರೆದಿದ್ದಾರೆ. ಸಕಲೇಶಪುರದ ಈ ಮಾನ್ಯ ಸದಸ್ಯರು ಸಾವಿರಾರು ರೂಪಾಯಿಗಳನ್ನು ಸ್ವತಂತ್ರ ಪಕ್ಷದಿಂದ ಪಡೆದು, ಸ್ವತಂತ್ರ ಪಕ್ಷದ ಚಿಹ್ನೆಯನ್ನು ಪಡೆದು, ಸ್ವತಂತ್ರ ಪಕ್ಷದ ತತ್ವಗಳನ್ನು ಒಪ್ಪಿ ಈ ಸಭೆಗೆ ಚುನಾಯಿತರಾಗಿ ಬಂದು, ಸಕಲೇಶಪುರದ ಜನತೆ ಕಾಂಗ್ರೆಸ್‌ಗೆ ವಿರೋಧವಾಗಿ ಓಟು ಕೊಟ್ಟಂಥ ಸಂದರ್ಭ ಇರುವಾಗ ಅದನ್ನು ಬಿಟ್ಟು ಬಿಟ್ಟು ಇವತ್ತು ಕಾಂಗ್ರೆಸ್‌ಗೆ ಸೇರಿಕೊಂಡಿರುವುದು ಆಶ್ಚರ್ಯವನ್ನುಂಟು ಮಾಡಿದೆ. ಇಂತಹ ಒಂದು ಮಿರ್ ಸಾದಕ್ ಕೆಲಸವನ್ನು ಅವರು ಮಾಡಿದ್ದಾರೆ. ಅನೇಕ ಕಡೆ ಮಾನ್ಯ ಮುಖ್ಯಮಂತ್ರಿಗಳು ಈ ಪ್ರಜಾಪ್ರಭುತ್ವ ಉಳಿಯಬೇಕಾದರೆ ಪಕ್ಷ ಬದಲಾವಣೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳಿದ್ದಾರೆ. ಅವರೇ ಇವತ್ತು ಸಕಲೇಶಪುರದ ಈ ಸದಸ್ಯರನ್ನು ತಮ್ಮ ಪಕ್ಷಕ್ಕೆ ಕರೆದುಕೊಳ್ಳುತ್ತಾ ಇರುವಂತಹದು ಒಂದು ಬಹಳ ವಿಷಾದದ ಸಂಗತಿ ಮತ್ತು ಬಹಳ ಆಶ್ಚರ್ಯವನ್ನುಂಟು ಮಾಡುವಂತಹದು. ತಾವು ಕಾಂಗ್ರೆಸ್ ಪಕ್ಷದ ವತಿಯಿಂದ ಕೊಡುವಂತಹ ಒಂದು ಆದೇಶವನ್ನು ಪಾಲಿಸಬಾರದು, ಯಾರು ನಮ್ಮ ಪಕ್ಷದಲ್ಲಿ ಇದ್ದರು ಅವರನ್ನು ನಾವು ಹೊರಗೆ ಹಾಕಿದ್ದೇವೆ ಎಂದು ನಾವು ಹೇಳಿದ ಮೇಲೆ ಮಾತ್ರ, ತಾವು ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Sri K. H. SRINIVASA (Sagar).—Sir, I rise to a point of Order. The hon. Member spoke about another hon. Member of this House without reference to any particular agenda before the House. I request that what all he spoke about Sri K. P. Chikke Gowda may not go on the record.

Sri H. SIDDAVEERAPPA.—Sir, I rise to a point of Order. There is another member from the Janata Paksha, whom they have taken into their fold. The only point is, I am sorry for the hon. Member who has crossed the floor. Knowing full well that some of them are crossing on over to this side, they could have advised him properly. They could have told him: 'Baba, don't come away; we are ourselves dividing'. I think there are no *bona fides* in taking him to their Party.

Sri K. PUTTASWAMY (Minister for Law, Labour and Parliamentary Affairs).—Sir, I rise to a point of Order. Hon member Sri H. B. Jwalanaiah remarked that the hon. member Sri K. P. Chikke Gowda is a 'Mir-Sadak', which is an unparliamentary word.

Sri H. SIDDAVEERAPPA.—It is parliamentary.

Sri K. PUTTTASWAMY.—Sir, I am very sorry for the interruption of the hon. Member Sri Siddaveerappa. When he rose, I actually